ನೀಡಿರುವುದಿಲ್ಲ 2005, 2006ರಲ್ಲಿ ಕಬಡ್ಡಿ ಮತ್ತು ಖೋ-ಖೋ ಕ್ರೀಡೆಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು

ಉ) 2005ನೇ ಸಾಲಿಗೆ ಸಂಬಂಧಿಸಿದಂತೆ ಏಕಲವ್ಯ ಪ್ರಶಸ್ತಿಗಾಗಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದ್ದು ಆ ಸಮಯದಲ್ಲಿ ಇದನ್ನು ಪರಿಗಣಿಸ ಲಾಗುವುದು 2006ನೇ ಸಾಲಿಗೆ ಸಂಬಂಧಿಸಿದಂತೆ ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಅನಂತರ ಕ್ರಮ ಕೈಗೊಳ್ಳಲಾಗುವುದು

898(1163) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಕೊರತೆ ನೀಗಿಸಲು ಜಪಾನ್ ಸರ್ಕಾರದ ಮಾದರಿಯಲ್ಲಿ ನೈಸರ್ಗಿಕ ಮತ್ತು ಕೃತಕ ವಿದ್ಯುತ್ ಉತ್ಪಾದನೆಗೆ ಸರ್ಕಾರ ಚಿಂತನೆ ನಡೆಸಿದೆಯೇ,

ಆ) ಇದರಿಂದ ಕರ್ನಾಟಕದ ನೆಲ, ಜಲ, ಪರಿಸರ ಮೂರ್ಣ ಉಳಿಸಲು ಸಹಕಾರಿಯಾಗುವುದಿಲ್ಲವೇ?

ಇ) ನೈಸರ್ಗಿಕ ವಿದ್ಯುತ್ ಉತ್ಪಾದನೆಗೆ ಸರ್ಕಾರದ ಬೆಂಬಲ ಸಾಕಷ್ಟು ಇಲ್ಲದಿರುವುದರಿಂದ ಉತ್ಪಾದನೆಯ ಅಭಾವಕ್ಕೆ ಕಾರಣವಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಜಪಾನ್ ಸರ್ಕಾರ ಉತ್ಪಾದಿಸುವ ನೈಸರ್ಗಿಕ ಮತ್ತು ಕೃತಕ ವಿದ್ಯುತ್‌ನ ವಿವರಗಳನ್ನು ತರಿಸಿಕೊಂಡು ಅವುಗಳನ್ನು ನಮ್ಮ ರಾಜ್ಯದಲ್ಲಿ ಉತ್ಪಾದನೆಗೆ ಬಳಸುವ ಸಾಧ್ಯತೆ ಬಗ್ಗೆ ಚಿಂತನೆ ನಡೆಸಲಾಗುವುದು ನೈಸರ್ಗಿಕ ಮೂಲಗಳಾದ ಪವನ, ಕಿರುಜಲ ಮತ್ತು ಸಹ ಉತ್ಪಾದನೆಗಳಿಂದ ವಿದ್ಯುತ್ ಉತ್ಪಾದನೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ

ಆ) ಸಹಕಾರಿಯಾಗುತ್ತದೆ

ಇ) ಇಲ್ಲ ನೈಸರ್ಗಿಕ ಮೂಲಗಳಾದ ಪವನ, ಕಿರುಜಲ, ಸಹ ಉತ್ಪಾದನೆ ಮತ್ತು ಜೈವಿಕಗಳಿಂದ ಖಾಸಗಿ ಅಭಿವೃದ್ಧಿದಾರರಿಂದ ಇದುವರೆಗೆ 1442 ಮೆ ವ್ಯಾ ನಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ

900(1165) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?